# ‘ಕೇಳುವವರು, ಓದುವವರೇ ಬುದ್ಧಿವಂತರು’

## ರಾಜಕಾರಣಿ, ಪತ್ರಕರ್ತರು ಜನರ ಭಾವನೆ ಅರಿತು ಕೆಲಸ ಮಾಡಲಿ: ಬೊಮ್ಮಾಯಿ | ವಿಶ್ವವಾಣಿ ಪ್ರಕಾಶನದ 6 ಕೃತಿ ಬಿಡುಗಡೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಕಾರಣ ಮತ್ತು ಪತ್ರಿಕೋದ್ಯಮಗಳ ನಡುವೆ ಅವಿನಾಭಾವ ಸಂಬಂಧವಿದೆ. ಎರಡೂ ಕ್ಷೇತ್ರಗಳಲ್ಲಿರುವವರು ಜನರು ತಾವು ಹೇಳುವುದನ್ನು ನಂಬುತ್ತಾರೆ ಎಂಬ ಮನಸ್ಥಿತಿಯಲ್ಲಿರುತ್ತಾರೆ. ಆದರೆ, ಮಾತನಾಡೋರಿಗಿಂತ ಕೇಳುವವರು ಹಾಗೂ ಬರೆಯುವವರಿಗಿಂತ ಓದುವವರು ಬುದ್ಧಿವಂತರಾಗಿರುತ್ತಾರೆ ಎಂಬುದನ್ನು ಅರಿತುಕೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದ ಪುರ ಭವನದಲ್ಲಿ ವಿಶ್ವವಾಣಿ ಪುಸ್ತಕ ಪ್ರಕಾಶನ ಏರ್ಪಡಿಸಿದ್ದ ಆರು ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ಪ್ರತಿಯೊಬ್ಬ ಪತ್ರಕರ್ತನೂ ರಾಜಕಾರಣಿ ಜತೆಗೆ ಒಡನಾಟ ಹೊಂದಿರಬೇಕು. ಆಗ ಮಾತ್ರ ರಾಜಕೀಯ ವಿದ್ಯಮಾನಗಳ ಬಗ್ಗೆ ನಿಖರ ಮಾಹಿತಿಯನ್ನು ಪಡೆದುಕೊಂಡು ವರದಿ ಮಾಡಬಹುದು. ರಾಜಕಾರಣವು ಪತ್ರಿಕೆ ಹಾಗೂ ಪತ್ರಕರ್ತರಿಲ್ಲದೆ ಇರಲು ಸಾಧ್ಯವಿಲ್ಲ. ಅದೇ ರೀತಿ ರಾಜಕಾರಣಿಗಳಿಲ್ಲದಿದ್ದರೆ ಪತ್ರಕರ್ತರು ಕೆಲಸ ಮಾಡಲು ಆಗುವುದಿಲ್ಲ. ಹೀಗಾಗಿ ಇಬ್ಬರ ನಡುವೆ ಅವಿನಾಭಾವ ಸಂಬಂಧವಿದೆ ಎಂದು ಹೇಳಿದರು.

ಆದರೆ, ಈ ಎರಡೂ ಕ್ಷೇತ್ರಗಳು ಜನರ ಭಾವನೆ ಅರಿತು ಕೆಲಸ ಮಾಡುವ ಹೊಣೆಗಾರಿಕೆಯಿದೆ. ರಾಜಕಾರಣಿಗಳು ಏನೇ ಮಾತನಾಡಿದರೂ ಜನರು ಎಲ್ಲವನ್ನೂ ನಂಬಲು ಹೋಗುವುದಿಲ್ಲ. ಅದೇ ರೀತಿ ಪತ್ರಿಕೆಗಳಲ್ಲಿ ಪ್ರಕಟವಾಗುವ ಸುದ್ದಿಯನ್ನೂ ವಿಮರ್ಶಿಸಿ, ಅವರಿಗೆ ಬೇಕಾದದ್ದನ್ನು ಮಾತ್ರ ತೆಗೆದುಕೊಳ್ಳುತ್ತಾರೆ ಎಂದರು.

ಕನ್ನಡ ಸಾಹಿತ್ಯ ಕ್ಷೇತ್ರ ಹಿಂದಿನಿಂದಲೂ ಸಂಕಷ್ಟದಲ್ಲಿದೆ. ಓದುಗರು ಪುಸ್ತಕ ಕೊಂಡು ಅದಕ್ಕೆ ನೀಡುವ ಹಣ ಸಾಹಿತಿಗಳಿಗೆ ಸರಿಯಾಗಿ ತಲುಪುವವರೆಗೆ ಕನ್ನಡ ಸಾಹಿತ್ಯದ ಸಮಸ್ಯೆ ನೀಗುವುದಿಲ್ಲ. ಅಲ್ಲದೆ, ಸರ್ಕಾರ ಪ್ರಾಯೋಜಿತ ಸಾಹಿತ್ಯದ ಗುಣಮಟ್ಟ ಕುಸಿಯುತ್ತದೆ. ಹೀಗಾಗಿ ಸಾಹಿತಿಗಳು ಸರ್ಕಾರದತ್ತ ಹೆಚ್ಚಿನ ನಿರೀಕ್ಷೆ ಇಟ್ಟುಕೊಳ್ಳಬಾರದು. ಆದರೂ, ಸಮಾಜ ಮತ್ತು ಸರ್ಕಾರ ಸಾಹಿತ್ಯವನ್ನು ಬೆಂಬಲಿಸಬೇಕು. ಆಗ ಮಾತ್ರ ಉತ್ತಮ ಸಾಹಿತ್ಯ ಹೊರಬರಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಪ್ರಸ್ತುತ ದಿನಗಳಲ್ಲಿ ಹಿಂಸೆ, ಹಿಂಸಾಚಾರದ ಮನೋಭಾವ ಹೆಚ್ಚುತ್ತಿದೆ. ಅದೇ ಎಲ್ಲದಕ್ಕೂ ಉತ್ತರ ಎಂಬ ಸಮಾಜ ನಿರ್ಮಾಣವಾಗುತ್ತಿದೆ. ಮುಂದಿನ ಪೀಳಿಗೆಯಲ್ಲಿ ಅದನ್ನು ತಡೆಯಲು ಮಾನವೀಯ ಗುಣ ಬೆಳೆಸುವ ಶಿಕ್ಷಣ ಪದ್ಧತಿ ಅತಿಮುಖ್ಯ. ಭಾರತ ಮತ್ತು ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಭಾರತದ ಸಾಹಿತ್ಯದಲ್ಲಿ ಸತ್ಯ ಪ್ರತಿಪಾದಿಸಲಾಗುತ್ತದೆ ಎಂದು ಹೇಳಿದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ರಾಜಕಾರಣಿಗಳಿಗೆ ಅವರ ಪತ್ನಿ ಮತ್ತು ಮಕ್ಕಳೇ ಮೊದಲ ವಿರೋಧಿಗಳು. ರಾಜಕಾರಣ ಮಾಡುತ್ತಾ ಕುಟುಂಬದವರಿಗೆ ಸಮಯವನ್ನೇ ನೀಡುವುದಿಲ್ಲ. ಹೀಗಾಗಿ ಅವರು ನಮ್ಮ ಮೇಲೆ ಕೋಪ ವ್ಯಕ್ತಪಡಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ರಾಜಕಾರಣ ಬಹಳ ಕಷ್ಟದ ಕೆಲಸ ಎಂಬಂತಾಗಿದೆ. ಆದರೂ, ನಾವೆಲ್ಲ ರಾಜಕಾರಣದಲ್ಲಿಯೇ ಮುಂದುವರಿಯಬೇಕಿದೆ ಎಂದರು.

ವಿಶ್ವವಾಣಿ ಸಂಪಾದಕ, ಲೇಖಕ ವಿಶ್ವೇಶ್ವರ ಭಟ್ ಅವರ ಸಂಪಾದಕರ ಸದ್ಯಶೋಧನೆ ಮೂರು ಕೃತಿಗಳು, ರೂಪಾ ಗುರುರಾಜ್ ಅವರ ಒಂದೊಳ್ಳೆ ಮಾತು, ಕಿರಣ್ ಉಪಾಧ್ಯಾಯ ಅವರ ಹೊರ ದೇಶವಾಸಿ, ಶಿಶಿರ್ ಹೆಗಡೆ ಅವರ ಶಿಶಿರ ಕಾಲ ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.

ಶಾಸಕ ಪ್ರದೀಪ್ ಈಶ್ವರ್, ಕನ್ನಡಪ್ರಭ-ಏಷಿಯಾನೆಟ್ ಸುವರ್ಣ ನ್ಯೂಸ್ ಪ್ರಧಾನ ಸಂಪಾದಕ ರವಿ ಹೆಗಡೆ, ಏಷಿಯಾನೆಟ್ ಸುವರ್ಣ ನ್ಯೂಸ್ ಸಂಪಾದಕ ಅಜಿತ್ ಹನಮಕ್ಕನವರ್, ಹಿರಿಯ ಪತ್ರಕರ್ತರಾದ ಗಿರೀಶ್ ರಾವ್ ಹತ್ವಾರ್, ಹರಿಪ್ರಕಾಶ್ ಕೋಣೆಮನೆ, ಕೆ.ಎನ್.ಚನ್ನೇಗೌಡ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ, ಉದ್ಯಮಿಗಳಾದ ಸದಾನಂದ ಮಯ್ಯ, ಷಡಕ್ಷರಿ ಉಪಸ್ಥಿತರಿದ್ದರು.



ನಗರದ ಪುರ ಭವನದಲ್ಲಿ ವಿಶ್ವವಾಣಿ ಪುಸ್ತಕ ಪ್ರಕಾಶನ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಆರು ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು. ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ಪ್ರದೀಪ್ ಈಶ್ವರ್, ವಿಶ್ವವಾಣಿ ಪತ್ರಿಕೆಯ ಸಂಪಾದಕ ವಿಶ್ವೇಶ್ವರ ಭಟ್, ಲೇಖಕರಾದ ರೂಪಾ ಗುರುರಾಜ್, ಕಿರಣ್ ಉಪಾಧ್ಯಾಯ, ಶಿಶಿರ್ ಹೆಗಡೆ ಇದ್ದರು.

### ‘ಪುಸ್ತಕ ಮಳಿಗೆಗಳಿಗಿಂತ ಮದ್ಯದಂಗಡಿ ಹೆಚ್ಚು’

ಹಿರಿಯ ಪತ್ರಕರ್ತ, ಲೇಖಕ ವಿಶ್ವೇಶ್ವರ ಭಟ್ ಮಾತನಾಡಿ, ಕನ್ನಡ ಪುಸ್ತಕೋದ್ಯಮ ಸಂಕಷ್ಟದಲ್ಲಿದೆ. ರಾಜ್ಯದಲ್ಲಿ ಕೇವಲ 42 ಪುಸ್ತಕ ಮಾರಾಟ ಮಳಿಗೆಗಳಿವೆ. ಕೋಲಾರದಂತಹ ಜಿಲ್ಲೆಗಳಲ್ಲಿ ಒಂದೂ ಪುಸ್ತಕ ಮಳಿಗೆಗಳಿಲ್ಲ. ಆದರೆ, ರಾಜ್ಯದಲ್ಲಿ 24 ಸಾವಿರ ಮದ್ಯ ಮಾರಾಟ ಮಳಿಗೆಗಳಿವೆ. ಸರ್ಕಾರಕ್ಕೆ ಪುಸ್ತಕ ರಂಗದಿಂದ ಯಾವುದೇ ಆದಾಯ ಬರುವುದಿಲ್ಲ. ಮದ್ಯ ಮಾರಾಟದಿಂದ ಸರ್ಕಾರಕ್ಕೆ ಆದಾಯ ಬರುತ್ತದೆ. ಇತ್ತೀಚಿನ ದಿನಗಳಲ್ಲಿ ಮದ್ಯ ಮಾರಾಟ ಮಳಿಗೆಗಳೇ ಸರ್ಕಾರವನ್ನು ನಡೆಸುತ್ತಿವೆ ಎಂಬ ಅನುಮಾನ ಕಾಡುತ್ತಿದೆ. ಪುಸ್ತಕೋದ್ಯಮ ಬೆಳವಣಿಗೆಗೆ ರಾಜ್ಯ ಸರ್ಕಾರದ ನೆರವು ಅತ್ಯಗತ್ಯ ಎಂದು ತಿಳಿಸಿದರು.

### ಲೋಕಾರ್ಪಣೆಗೊಂಡ ಆರು ಕೃತಿಗಳು

- ವಿಶ್ವೇಶ್ವರ ಭಟ್ ವಿರಚಿತ ಸಂಪಾದಕರ ಸದ್ಯಶೋಧನೆ 3 ಕೃತಿ
- ರೂಪಾ ಗುರುರಾಜ್ ಅವರ ಒಂದೊಳ್ಳೆ ಮಾತು
- ಕಿರಣ್ ಉಪಾಧ್ಯಾಯ ವಿರಚಿತ ಹೊರ ದೇಶವಾಸಿ
- ಶಿಶಿರ್ ಹೆಗಡೆ ಅವರ ಶಿಶಿರ ಕಾಲ